Date : 16/12/2024

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಶ್ರೀ ಆರ್.ಬಿ. ವಕೀಲರಿಂದ –**

ನಾನು ಈ ಕೇಸಿನಲ್ಲಿ ಅರ್ಜಿದಾರ SPA Holder ಇರುತ್ತೇನೆ. ನನ್ನ ಮುಖ್ಯ ಸಾಕ್ಷ್ಯದ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿದ್ದು, ಅವು ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಅರ್ಜಿ ಮತ್ತು ಸಾಕ್ಷ್ಯಕ್ಕೆ ಪೂರಕವಾಗಿ, ವಿಶೇಷ ಅಧಿಕಾರ ಪತ್ರ, ಪಹಣಿ ಪತ್ರಿಕೆ ಮತ್ತು ಪರಿಷ್ಕೃತ ಮಾರುಕಟ್ಟೆ ಬೆಲೆ ಪಟ್ಟಿಗಳನ್ನು ಹಾಜರುಪಡಿಸಿದ್ದು , ಅವುಗಳನ್ನು ನಿಪಿ–1 ರಿಂದ ನಿಪಿ–3 ಎಂದು ಗುರುತಿಸಲಾಯಿತು.

**– ಪಾಟೀ ಸವಾಲು – ಶ್ರೀ ಜಿ.ಎಂ.ಎಸ್. ವಕೀಲರಿಂದ –**

ನಮ್ಮದು ಖುಷ್ಕಿ ಜಮೀನು ಎಂದರೆ ಸರಿಯಲ್ಲ. ಈ ವರ್ಷ ಜಮೀನಿನಲ್ಲಿ ಈರುಳ್ಳಿ ಬೆಳೆ ಬೆಳೆದಿದ್ದೇನೆ. ಪಹಣಿಯಲ್ಲಿ ಬೆದ್ದಲು ಜಮೀನು ಎಂದು ನಮೂದು ಇದೆ ಎಂದರೆ ಸರಿ. ಹಳೆ ಲೈನನ್ನು ತೆಗೆದು ಹೊಸಲೈನನ್ನು ಎಳೆದಿರುತ್ತಾರೆ ಎಂದರೆ ಸರಿಯಲ್ಲ. ಭೂಮಿಯ ಅಪಮೌಲ್ಯಕ್ಕೆ ಎದುರುದಾರರು ಪರಿಹಾರವಾಗಿ ರೂ.1,27,304/– ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ ಆದರೆ ಅದನ್ನು ಬೆಳೆ ನಷ್ಟಕ್ಕೆ ಕೊಟ್ಟಿರುತ್ತಾರೆ. ಬೆಳೆ ನಷ್ಟಕ್ಕಾಗಿ ರೂ.86,822/– ಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಎಕರೆಗೆ 50 ಲಕ್ಷ ರೂಪಾಯಿ ಬೆಲೆ ಬಾಳುತ್ತಿತ್ತು ಅಂತ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಖರ್ಚು ತೆಗೆದು ವಾರ್ಷಿಕ 2 ಲಕ್ಷ ವರಮಾನ ಬರುತ್ತಿತ್ತು ಅಂತ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಈಗಲೂ ಸಹ ಮೊದಲಿನಂತೆ ಬೆಳೆ ಬೆಳೆಯುತ್ತಿದ್ದರೂ ಸಹ ಹೆಚ್ಚಿನ ಪರಿಹಾರದ ಹಣ ಪಡೆಯಲು ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಜಿಲ್ಲಾಧಿಕಾರಿಗಳ ಆದೇಶದಂತೆ ನಮಗೆ ಸೂಕ್ತ ಪರಿಹಾರ ನೀಡಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರು ಕೊಟ್ಟಿರುವ ಪರಿಹಾರವು ಅಂತಿಮ ಮತ್ತು ಸರಿಯಾದ ಪರಿಹಾರ ಎಂದರೆ ಸರಿಯಲ್ಲ. ಯಾವುದೇ ಪ್ರತಿರೋಧ ತೋರದೇ ಪರಿಹಾರದ ಹಣವನ್ನು ಪಡೆದಿದ್ದೇವೆ ಎಂದರೆ ಸರಿಯಲ್ಲ.

ನಾನು ಎದುರುದಾರರಿಂದ ಸೂಕ್ತ ಪರಿಹಾರದ ಹಣ ಪಡೆದಿದ್ದರೂ ಕೂಡ, ಇನ್ನೂ ಹೆಚ್ಚಿನ ಹಣ ಪಡೆಯುವ ದುರುದ್ದೇಶದಿಂದ ಸುಳ್ಳು ಪ್ರಕರಣ ಹಾಕಿ, ಸುಳ್ಳು ದಾಖಲೆಗಳನ್ನು ಹಾಕಿ, ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ , ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.